# ಅಲ್ಪ ಭೂಮಿ, ಸ್ವಲ್ಪ ನೀರಿನಲ್ಲಿ ಸಮೃದ್ಧ ಬೆಳೆ



■ ಮೌನೇಶ್ವರಿ ಕಮ್ಮಾರ / ಅರ್ಜುನ ಸೂಲಗಿತ್ತಿ

ರಂಗಪ್ಪ ರಡ್ಡೇರ ಅವರು ಎಂ.ಎ, ಬಿ.ಎಡ್ ಪದವಿ ಪೂರೈಸಿದ ಬಳಿಕ ಪ್ರಾಥಮಿಕ ಶಾಲೆ ಶಿಕ್ಷಕರಾಗಿದ್ದವರು. ಆದರೆ, ಅವರ ತುಡಿತ ಕೃಷಿಯೆಡೆಗೆ. ಕೇವಲ ಒಂದೂವರೆ ಎಕರೆ ಪಿತ್ರಾರ್ಜಿತ ಆಸ್ತಿ. ಈ ಚಿಕ್ಕ ಹಿಡುವಳಿಯಲ್ಲೇ ಕೃಷಿ ಪಯಣ ಆರಂಭಿಸಿದರು.,,

ರಂಗಪ್ಪ ಅವರು ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ ತಾಲೂಕಿನ ಅಲ್ಲೂರ ಎಸ್.ಪಿ. ಗ್ರಾಮದವರು. ಮೊದಲು ಎಲ್ಲರಂತೆ ಶೇಂಗಾ, ಸಜ್ಜೆ ಜೋಳ ಮತ್ತು ಸೂರ್ಯಕಾಂತಿ ಬೆಳೆ ಬೆಳೆದರು. ಆರ್ಥಿಕ ಸುಧಾರಣೆಯಾಗಲಿಲ್ಲ. ನೀರಾವರಿ ಕೃಷಿ ಮಾಡುವ ಕನಸು ಕಂಡರು. 2017-18ರಲ್ಲಿ ಸಾಲ ಮಾಡಿ ಕೊಳವೆ ಬಾವಿ ಕೊರೆಯಿಸಿದರು. ಒಂದೂವರೆ ಇಂಚು ನೀರಿನ ಸೆಲೆ ಸಿಕ್ಕಿತು. ನೀರುಳಿಸುವ ಕೃಷಿ ತಂತ್ರಜ್ಞಾನಗಳ ಬಗ್ಗೆ ಚಿಂತಿಸಿದರು. ಕೃಷಿ ವಿಜ್ಞಾನ ಕೇಂದ್ರ, ಕೃಷಿ ಇಲಾಖೆ ಸಿಬ್ಬಂದಿ ಭೇಟಿ ಮಾಡಿ ಮಾಹಿತಿ ಪಡೆದುಕೊಂಡರು. ಪ್ರಗತಿಪರ ರೈತರ ತಾಕುಗಳಿಗೆ ಭೇಟಿ ನೀಡಿ ಮತ್ತೊಂದಷ್ಟು ಮಾಹಿತಿ ಸಂಗ್ರಹಿಸಿದರು. ಹನಿ ನೀರಾವರಿ ಅಳವಡಿಸಿಕೊಂಡರು. ಜತೆಗೆ ಕಡಿಮೆ ನೀರು ಬೇಡುವ ಔಷಧ ಸಸ್ಯ, 550 ಮಹಾಗನಿ, 350 ಶ್ರೀಗಂಧ, 100 ಲಿಂಬು, 100 ಪೇರಲ, 25 ತೆಂಗು ಕರಿಬೇವು ಬೆಳೆಸಿದರು. ಇನ್ನೊಂದು ಸ್ವಲ್ಪ ಜಾಗದಲ್ಲಿ ಈರುಳ್ಳಿ ಬೆಳೆದರು. ಹೀಗೆ ಮಿಶ್ರ ಪದ್ಧತಿಯಿಂದ ಹೆಚ್ಚಿನ ಆದಾಯ ಬರುವುದೆಂಬುದನ್ನು ಅರಿತಿದ್ದ ಅವರು ನಾನಾ ಗಿಡ, ಬೆಳೆ ಬೆಳೆದರು. ಈರುಳ್ಳಿ, ಮೆಣಸಿನಕಾಯಿ, ಬದನೆ ಬೆಳೆಯನ್ನು ಮಿಶ್ರ ಬೆಳೆ ಪದ್ಧತಿಯಲ್ಲಿ ಬೆಳೆದರು. ''ದನವಿಲ್ಲದಿದ್ದರೆ ಧನವಿಲ್ಲ'' ಎಂಬ ಮಾತಿನಂತೆ ಮೂರು ಆಕಳು ಕಟ್ಟಿಕೊಂಡರು. ಈಗ ಅವರಿಗೆ ಹೈನುಗಾರಿಕೆಯಿಂದಲೂ ಆದಾಯ ಬರುತ್ತಿದೆ.

## ಸಾವಯುವ ಘಟಕ

ರಂಗಪ್ಪ ರಡ್ಡೇರ ಅವರು ಸಾವಯವ ಕೃಷಿ ತರಬೇತಿ ಪಡೆದು ಸಾವಯವ ಕೃಷಿ ಪದ್ಧತಿ ಅನುಸರಿಸುತ್ತಿದ್ದಾರೆ. ಹೈನುಗಾರಿಕೆ, ಅರಣ್ಯ ಕೃಷಿ, ಕೋಳಿ ಸಾಕಾಣಿಕೆ, ಟಗರು ಸಾಕಣೆ ಮಾಡುತ್ತಿದ್ದಾರೆ. ಸಾವಯವ ಕೃಷಿಯ ಎಲ್ಲ ಘಟಕಗಳನ್ನು ಅಳವಡಿಸಿಕೊಂಡಿದ್ದಾರೆ. ಒಂದೂವರೆ ಎಕರೆ ಭೂಮಿಯಲ್ಲಿ 20 ತರಹದ ಕೃಷಿ ಬೆಳೆಗಳಿವೆ. ಮನೆಯ ಸದಸ್ಯರು ಬಹುತೇಕ ಕೃಷಿ ಕಾರ್ಯಗಳನ್ನು ಮಾಡುತ್ತಾರೆ. ಹೀಗಾಗಿ ಆಳಿನ ಖರ್ಚು ಅವರಿಗೆ ಇಲ್ಲ, ''ನಾನು ಪ್ರತಿ ವರ್ಷ 2 ಲಕ್ಷರೂ. ಖರ್ಚು ಮಾಡಿ, ಐದೂವರೆ ಲಕ್ಷ ರೂಪಾಯಿ ಆದಾಯ ಗಳಿಸುತ್ತೇನೆ. 3.5 ಲಕ್ಷರೂ. ನಿವ್ವಳ ಆದಾಯ ಬರುತ್ತಿದೆ'' ಎಂದು ರಂಗಪ್ಪ ಹೇಳುತ್ತಾರೆ.

ಹೆಚ್ಚಿನ ಮಾಹಿತಿಗೆ ಮೊ: 9611822292

Scanned with CamScanner